ಕುಟುಂಬ ಕಲ್ಯಾಣ ಯೋಜನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಿದ್ದರೆ ಶಾಲೆ ತೆರೆಯಲು ೩೦೦ ಜನ ಸಂಖ್ಯೆ ಇರಬೇಕೆಂದು ನಿಯಮ ಏನಿದೆ, ಅದನ್ನು ಸಡಿಲಗೊಳಿಸಬೇಕೆಂದು ಹೇಳುತ್ತೇನೆ.

ಇನ್ನು ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿರುವ ಹಣವನ್ನು ಯಾವಯಾವ ಉದ್ದೇಶಗಳಿಗೆ ಖರ್ಚು ಮಾಡಲಾಗಿದೆ ಎಂಬುದನ್ನು ತಿಳಿಸಬೇಕು.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಈಗ ಮಾನ್ಯ ಸದಸ್ಯರು ಹೇಳಿದಂಥ ಹಳ್ಳಿಗಳಲ್ಲಿ ಎಲ್ಲರೂ ಕುಟುಂಬ ಕಲ್ಯಾಣ ಯೋಜನೆಯನ್ನು ಅನುಸರಿಸಿದ್ದರೆ ಖಂಡಿತವಾಗಿಯೂ ಶಾಲೆಗೋಸ್ಕರವಾಗಿ ಜನ ಸಂಖ್ಯೆಯನ್ನು ಹೆಚ್ಚು ಮಾಡಬೇಕಾಗಿಲ್ಲ. ಅವರು ಹೇಳಿದ ಎರಡು ಹಳ್ಳಿಗಳಿಗೆ ಶಾಲೆಯನ್ನು ಕೊಡುತ್ತೇನೆ.

ಇನ್ನು ಈ ಹಣವನ್ನು ಏತಕ್ಕಾಗಿ ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ಈ ಹಣವನ್ನು ಇನ್‌ಸೆಂಟೀವ್ ಕೊಡುವುದಕ್ಕಾಗಿ ಅಂದರೆ ಉಚಿತವಾಗಿ ಪುಸ್ತಕಪುಸ್ತಕಗಳನ್ನು ಹಂಚಲು, ಮಧ್ಯಾಹ್ನದ ಊಟ ಒದಗಿಸಲು ಮತ್ತು ಅಟೆಂಡೆನ್ಸ್ ಸ್ಕಾಲರ್‌ಷಿಪ್ ಕೊಡಲು ಖರ್ಚು ಮಾಡಿದ್ದೇವೆ.

ಶ್ರೀ ಪೇರ್‌ಖಾನ್.—ಮಾನ್ಯ ಮಂತ್ರಿಗಳು ಕಡ್ಡಾಯ ಶಿಕ್ಷಣದ ಜಾರಿಯ ಬಗ್ಗೆ ತಿಳಿಸಿದರು. ಅಂದರೆ, ಯಾವುದೇ ಒಂದು ಭಾಷೆಯ ಅಂದರೆ ಉರ್ದು, ತೆಲುಗು, ಮರಾಠಿ ಹೀಗೆ ಯಾವುದೇ ಭಾಷೆಯಲ್ಲಿ ಕಲಿಯಲು ೩೦ ಹುಡುಗರಿದ್ದರೆ ಒಂದು ಶಾಲೆಯನ್ನು ತೆರೆಯುತ್ತೀರೋ ಅಥವಾ ಈ ನಿಯಮ ಕೇವಲ ಒಂದು ಭಾಷೆಗೆ ಸೀಮಿತವಾಗಿದೆಯೋ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಇದು ಯಾವುದೇ ಒಂದು ಭಾಷೆಗೆ ಸೀಮಿತವಾಗಿಲ್ಲ. ಯಾವ ಭಾಷೆಯಲ್ಲಿ ಕಲಿಯಬೇಕೆಂದು ಮಕ್ಕಳು ಇಷ್ಟಪಡುತ್ತವೋ ಅದನ್ನು ನಾವು ಆಡಾಪ್ಟ್ ಮಾಡುತ್ತೇವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಕ್ಕಳಿಗೆ ಮಿಡ್ಡೇ-ಮೀಲ್ಸ್ ಒದಗಿಸಲು ಸರ್ಕಾರದವರು ಪ್ರತಿ ಶಾಲೆಗೆ ರವೆ ಮತ್ತು ಎಣ್ಣೆಯನ್ನು ಒದಗಿಸುತ್ತಾರೆ. ಸೌದೆ, ಮೆಣಸಿನಕಾಯಿ ಹಾಗೂ ಉಪ್ಪಿನ ಖರ್ಚನ್ನು ಆಯಾ ಗ್ರಾಮಂಸ್ಥರೂ ಇಲ್ಲವೇ ಗ್ರಾಮಪಂಚಾಯಿತಿಯವರು ವಹಿಸಿಕೊಳ್ಳಬೇಕಾಗಿದೆ. ಆದರೆ ಕೆಲವು ಕಡೆಗಳಲ್ಲಿ ಸೌದೆ ದೊರೆಯುವುದಿಲ್ಲ ಮತ್ತು ಈ ಖರ್ಚನ್ನು ವಹಿಸಿಕೊಳ್ಳಲು ಕೆಲವು ಕಡೆಗಳಲ್ಲಿ ಯಾರೂ ಮುಂದೆ ಬರುವುದಿಲ್ಲ. ಆದಕಾರಣ ಸರ್ಕಾರದವರೇ ಈ ಖರ್ಚನ್ನು ಸಹ ವಹಿಸಿಕೊಂಡು ಎಲ್ಲ ಮಕ್ಕಳಿಗೂ ನ್ಯೂಟ್ರಿಷನ್ ಫುಡ್ ಒದಗಿಸುತ್ತೀರಾ ?

ಅಧ್ಯಕ್ಷರು.—ಸಾದಿಲ್ವಾರು ಖರ್ಚನ್ನು ಸಹ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಅವರು ಕೇಳುತ್ತಿದ್ದಾರೆ ;

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಈಗ ಕೇರ್ ಪ್ರೋಗ್ರಾಮ್ ಮೂಲಕ ಮಿಡ್ಡೆ-ಮಿಲ್ಸ್‌ನ್ನು ಕೊಡಲಾಗುತ್ತಿದೆ. ಕೇರ್ ಸಂಸ್ಥೆಯಿಂದ ನಮಗೆ ಎಣ್ಣೆ ಮತ್ತು ರವೆ ಬರುತ್ತದೆ. ಅದನ್ನು ನಾವು ಕೊಡುತ್ತೇವೆ. ಇನ್ನುಳಿದ ಸಾಮಾನುಗಳನ್ನು ಸ್ಥಳೀಯ ಮುಖಂಡರಾಗಲೀ, ಬೆಟರ್‌ಮೆಂಟ್ ಕಮಿಟಿಯವರಾಗಲೀ ಅಥವಾ ಪಂಚಾಯಿತಿಯವರಾಗಲೀ ಒದಗಿಸಲು ಮುಂದೆ ಬರಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಆದರೆ ಯಾವ ಹಳ್ಳಿಗಳಲ್ಲಿ ಈ ರೀತಿಯ ಕಾಂಟ್ರಿಬ್ಯೂಷನ್ ಮಾಡಲು ಮುಂದೆ ಬರುವುದಿಲ್ಲವೋ ಅಂತಹ ಕಡೆಗಳಲ್ಲಿ ಸ್ಪೆಷಲ್ ನ್ಯೂಟ್ರಿಷನ್ ಫುಡ್‌ನ್ನು ಕೊಡುವ ಏರ್ಪಾಡು ಮಾಡಿದ್ದೇವೆ.

Mahadeva Textile Mills, Hubli

500 SRI M. G. JARTARGAR (Hubli)—Will the Chief Minister be pleased to state :—

(a) the value of textiles sold and the quantum of production of yarn in the year 1979-80 and 1980-81 in Mahadeva Cotton Mills, Hubli consequent on its taken over by the Government ;

(b) the value of the textiles sold and exported to foreign countries and profits earned during the above two years (Details may please be furnished) ;

(c) the number of workers working in the Mill at present ;

(d) whether measures would be taken to modernise the Mill to provide more employment to the labourers, in particular and to the poor people in general ;

(e) whether Government would encourage by providing Rs. 4 Crores which is required for modernisation of the Mill ?

SRI R. GUNDU RAO (Chief Minister).—

(a) The administration of the Mahadeva Cotton Mills, Hubli was taken over by the State Government on 4-4-1979 as per the directions of the Central Government. The details of the sale of the textiles the quantum of yarn produced and its price during the years 1979-80 and 1980-81 are as follows :—

Details	1979-80	1980-81
	(*Rs. in Lakhs*)	(*Rs. in Lakhs*)
1. Amount of Textiles sold	72.43	157.70
2. Amount of Yarn sold	23.79	31.85
3. Yarn Produced	5.86 Kg.	7.37 Kg.
4. Yarn used for Weaving	3.89 Kg.	5.96 Kg.
5. Yarn sold	1.46 Kg.	1.91 Kg

(b) During 1979-80 Textile goods worth Rs. 1-83 lakhs and during 1980-81 textile goods worth Rs. 3.79 lakhs were exported. Approximately profit at 8% has been earned.

(c) 1238.

(d) There is possibility of providing more employment opportunities if its production capacity is raised duly modernising the Mill.

ಶ್ರೀ ಎಂ ಜಿ. ಜರತಾರಘರ್.—ಈ ಮಹದೇವ ಜವಳಿ ಗಿರಣಿಯನ್ನು ರಾಜ್ಯಸರ್ಕಾರದವರು ವಹಿಸಿಕೊಂಡ ಮೇಲೆ ಒಳ್ಳೆಯ ಪ್ರಗತಿಯಿಂದ ನಡೆದಿದೆ. ಈ ಕಾರಣದಿಂದ ಇಲ್ಲಿ ಉತ್ಪಾದನೆಯಾದಂಥ ನೂಲನ್ನು ಗದಗ್ ಮತ್ತು ರಾಣಿಬೆನ್ನೂರಿನಲ್ಲಿರುವ ಬಡನೇಕಾರರಿಗೆ ಅಗ್ಗದ ದರದಲ್ಲಿ ಪೂರೈಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲಿ ತಯಾರಾದ ನೂಲನ್ನು ಅಗ್ಗದ ದರದಲ್ಲಿ ಕೊಟ್ಟರೆ ಅದಕ್ಕೆ ಸರ್ಕಾರ ಸಬ್ಸಿಡಿ ಕೊಡಬೇಕಾಗುತ್ತದೆ. ಆದಕಾರಣ ಮಿಲ್ ಮೂಲಕ ಅಗ್ಗದ ದರದಲ್ಲಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಜಿ. ಜರತಾರಘರ್.—ಸರ್ಕಾರದಿಂದ ಏನಾದರೂ ಸವಲತ್ತುಗಳನ್ನು ಕೊಡುವ ಮೂಲಕ ಬಡನೇಕಾರರಿಗೆ ಕಡಿಮೆ ಬೆಲೆಗೆ ನೂಲನ್ನು ಪೂರೈಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಈ ಪ್ರಶ್ನೆಯಲ್ಲಿ ಉದ್ಭವವಾಗುವುದಿಲ್ಲ. ಬಡನೇಕಾರರಿಗೆ ನೂಲನ್ನು ರಿಯಾಯಿತಿ ದರದಲ್ಲಿ ಪೂರೈಕೆ ಮಾಡಬೇಕೆಂದು ಕೇಳುತ್ತಿರುವುದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಆದಕಾರಣ ಮಾನ್ಯ ಸದಸ್ಯರು ಬೇರೆ ಒಂದು ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಪಂಪಾಪತಿ.—ಇಲ್ಲಿ ಕೊನೆಯ ಪ್ರಶ್ನೆಗೆ ಉತ್ತರವಾಗಿ ಆಧುನೀಕರಣ ಗೊಳಿಸಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿದರೆ ಉದ್ಯೋಗಾವಕಾಶವು ಹೆಚ್ಚುವ ಸಂಭವವಿದೆ. ಇದಕ್ಕೆ ಬೇಕಾಗುವ ಹಣದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಪರಿಶೀಲಿಸಲಾಗುವುದೆಂದು ಹೇಳಿದ್ದಾರೆ. ಅಂದರೆ ಹೊಸ ಮಿಷಿನರಿಗಳನ್ನು ತಂದು ಆಧುನೀಕರಣಗೊಳಿಸುತ್ತೀರೋ ಅಥವಾ ಈಗಿರುವ ಮಿಷಿನರಿಗಳನ್ನೇ ಆಧುನೀಕರಣ ಮಾಡುತ್ತೀರೋ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಧುನೀಕರಣವೆಂದರೆ ಹೊಸ ಮಿಷಿನರಿಗಳನ್ನು ಹಾಕಬೇಕಾಗುತ್ತದೆ. ಇದರ ಜೊತೆಗೆ ಕೆಲವು ಮೇನೇಜ್‌ಮೆಂಟ್ ಸಿಸ್ಟಮ್‌ನ್ನು ಬದಲಾವಣೆ ಮಾಡಬೇಕಾಗುತ್ತದೆ. ಇದಕ್ಕೆ ಸುಮಾರು ೫೫ ಕೋಟಿ ರೂ.ಗಳು ಬೇಕಾಗುತ್ತದೆ. ಈ ಸಿಕ್-ಯೂನಿಟ್‌ನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡು ನಮ್ಮ ಮೇನೇಜ್‌ಮೆಂಟ್‌ಗೆ ಕೊಟ್ಟಿದ್ದಾರೆ ಅದರಂತೆ ನಾವು ನಡೆಸುತ್ತಿದ್ದೇವೆಯೋ ಹೊರತು ನಾವು ಲೆಸ್ಸಿ ಅಲ್ಲ. ಈ ಬಗ್ಗೆ ನಾವು ಸುಪ್ರೀಂ ಕೋರ್ಟ್‌ನ ವಕೀಲರನ್ನು ವಿಚಾರ ಮಾಡಿದಾಗ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆಂದರೆ, ಈ ಮಿಲ್‌ಗೆ ಯಾವುದೇ ರೀತಿಯಿಂದ ಬ್ಯಾಂಕ್‌ಗಳ ಮೂಲಕ ಹಣವನ್ನು ಪಡೆಯುವುದಕ್ಕಾಗುವುದಿಲ್ಲ ಎಂದು : ಆದಕಾರಣ ಸರ್ಕಾರವೇ ಏನಿದ್ದರೂ ಹಣದ ಸಹಾಯ ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಈ ಮಿಲ್‌ಗೆ ಇಷ್ಟರವರೆಗೆ ೧೩೫ ಲಕ್ಷ ರೂ ಗಳನ್ನು ಕೊಟ್ಟಿದೆ. ಇದರ ಮೇಲೆ ಮತ್ತೆ ನಾವು ೫೫ ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದವರು ನಮಗೆ ಈ ಮಿಲ್‌ನ್ನು ಮಾರ್ಚ್ ೧೯೮೩ ವರೆಗೆ ಮಾತ್ರ ನಡೆಸಲು ಪರಿಹಿಸಿಕೊಟ್ಟಿದ್ದಾರೆ.

ಈ ಒಂದು ಮ್ಯಾನೇಜ್‌ಮೆಂಟ್ ಅನ್ನು ಹಿಂದಿನ ಮ್ಯಾನೇಜ್‌ಮೆಂಟ್‌ಗೆ ಕೊಡಬೇಕೆ ಅಥವಾ ಅದನ್ನು ನಾವೇ ತೆಗೆದುಕೊಂಡು ನಿರ್ವಹಿಸಬೇಕೇ ಎನ್ನುವ ಬಗ್ಗೆ ಒಂದು ಅಂತಿಮ ನಿರ್ಣಯವನ್ನು ಸೆಪ್ಟೆಂಬರ್ ೮೨ರ ಒಳಗೆ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಅದನ್ನು ಆಧುನೀಕರಣಗೊಳಿಸಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಾಗಲಿ, ಉದ್ಯೋಗಾವಕಾಶವನ್ನು ಹೆಚ್ಚಿಸುವುದಾಗಲಿ ಮಾಡಬೇಕಾದರೆ ಕಾನೂನು ರೀತ್ಯಾ ಹೋಗಬೇಕಾಗುತ್ತದೆ, ಹಾಗೆಯೇ ಮಾಡುವ ಹಾಗಿಲ್ಲ.

ಶ್ರೀ ಪಂಪಾಪತಿ.—ಮ್ಯಾನೇಜ್‌ಮೆಂಟ್‌ಗೆ ಇದನ್ನು ಕೊಡುವುದಕ್ಕಿಂತಲೂ ತಾವು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ಸರ್ಕಾರವೇ ವಹಿಸಿಕೊಂಡು ಅದನ್ನು ಆಧುನೀಕರಣಗೊಳಿಸಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ಜೊತೆಗೆ ಉದ್ಯೋಗಾವಕಾಶವನ್ನೂ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಆ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಅದಕ್ಕೋಸ್ಕರವಾಗಿ ಒಂದು ಸಮಯವನ್ನು ನಿಗದಿ ಮಾಡಿದ್ದೇವೆ. ಸ್ವಲ್ಪ ಕಾದು ನೋಡೋಣ.

ಶ್ರೀ ಪಂಪಾಪತಿ.—ಈ ಪ್ರಶ್ನೋತ್ತರ ಪಟ್ಟಿಯಲ್ಲಿ ತಾವು ಉತ್ತರ ಕೊಟ್ಟಿರುವುದಕ್ಕೂ ಈಗ ತಾವು ಹೇಳುವುದಕ್ಕೂ ಒಂದಕ್ಕೊಂದಕ್ಕೆ ವ್ಯತಿರಿಕ್ತವಾಗಿದೆ. ತಾವು ಇಂಥಾ ದಿನಾಂಕದೊಳಗೆ ಇಂತಿಂಥಾ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಅಂತ ಏನೂ ಹೇಳಿಲ್ಲಾ, ಮತ್ತು ಇಂಥಾ ಕಾರ್ಯಕ್ರಮಕ್ಕೆ ಇಂತಿಷ್ಟು ಸಮಯ ಅನ್ನುವ ಬಗ್ಗೆಯೂ ನಿಗದಿ ಮಾಡಿಲ್ಲಾ. ಆದುದರಿಂದ ಕರಾರುವಾಕ್ಕಾಗಿ ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನೇನೂ ವ್ಯತಿರಿಕ್ತವಾಗಿ ಹೇಳಿಲ್ಲಾ, ಪ್ರಶ್ನೋತ್ತರ ಪಟ್ಟಿಯಲ್ಲಿ ಏನು ಉತ್ತರ ಇದೆಯೋ ಅದನ್ನೇ ಹೇಳಿದ್ದೇನೆ. ಅಲ್ಲದೆ ಈ ಒಂದು ಸಂಸ್ಥೆ ಸರ್ಕಾರಕ್ಕೆ ಸೇರಿದ ಒಂದು ಗಿರಣಿ ಅಥವಾ ನಮಗೆ ಸೇರಿದಂಥಾ ಒಂದು ಇನ್ಸ್‌ಟ್ಯೂಷನ್ ಸಹ ಅಲ್ಲ. ಇದನ್ನು ಒಂದು ವ್ಯವಹಾರ ಕೋಸ್ಕರ ತೆಗೆದುಕೊಂಡಿದ್ದೇವೆ. ಅಲ್ಲದೆ ಈ ಖಾಸಗೀ ಗಿರಣಿಗೆ ಯಾರೂ ಸಹ ಬ್ಯಾಂಕ್‌ನವರಾಗಲಿ ಇನ್ನಿತರ ಹಣಕಾಸಿನ ಸಂಸ್ಥೆಯಾಗಲಿ ಹಣಕೊಡುವುದಿಲ್ಲ, ಹಣ ಕೊಟ್ಟರೆ ಸರ್ಕಾರದವರೇ ಕೊಡಬೇಕು ಕಾನೂನು ರೀತ್ಯಾ ಈಗ ಏನು ಮಾಡುವುದಕ್ಕೂ ಬರುವುದಿಲ್ಲ, ಆದರ ಮುಂದಿನ ಭವಿಷ್ಯ ಏನು ಅನ್ನುವುದು ತೀರ್ಮಾನವಾಗದೇ ಇರುವುದರಿಂದ ಈಗ ಏನೂ ಮಾಡುವುದಕ್ಕಾಗುವುದಿಲ್ಲ, ಅದಕ್ಕೋಸ್ಕರವಾಗಿ ಸೆಪ್ಟೆಂಬರ್ ೮೨ರ ಒಳಗೆ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು ಎಂದು ನಾನು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ.

ಶ್ರೀ ಹೆಚ್. ಗಂಗಾಧರನ್.— ತಾವು ಇದನ್ನು ಪರಿಶೀಲಿಸಿಕೊಂಡ ಮೇಲೆ ಇದುವರೆಗೆ ಎಷ್ಟು ಬಂಡವಾಳ ಹಾಕಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—೧೩೫ ಲಕ್ಷ.

ಶ್ರೀ ಎಂ. ಚಂದ್ರಶೇಖರ್.—ಇದುವರೆಗೆ ನೂಲಿನ ಉತ್ಪಾದನೆ ಎಷ್ಟು ಆಗಿದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—೫೯೬ ಲಕ್ಷ ಕೆ.ಜಿ. ಅಷ್ಟು ಆಗಿದೆ.

ಶ್ರೀ ಎಂ. ಜಿ. ಜರತಾರಘರ್.— ಸ್ವಾಮಿ, ನಮ್ಮ ಧಾರವಾಡ ಜಿಲ್ಲೆಯಲ್ಲಿ ೯ ನೂಲು ಗಿರಣಿಗಳು ಇವೆ. ಇದಕ್ಕೆ ಈವಾಗ ಏನು ಹಣ ಕೊಟ್ಟಿದ್ದೀರಿ ಆದು ಸಾಲದು. ಈಗ ಕೊಟ್ಟಿರುವ ಹಣದಲ್ಲಿ ಇದರ ಉತ್ಪಾದನೆಯನ್ನು ಹೆಚ್ಚಿಸಲಿಕ್ಕೆ ಆಗುವುದಿಲ್ಲ. ನಮ್ಮ ಕರ್ನಾಟಕದಲ್ಲಿ ಇದು ಹಿಂದುಳಿದ ಜಿಲ್ಲೆ ಎಂದು ಪರಿಗಣಿಸಿರುವುದರಿಂದ, ಇದು ಅಭಾವದ ಜಿಲ್ಲೆಯಾಗಿರುವುದರಿಂದ ಅಲ್ಲಿಯ ಸಾಮಾನ್ಯ ಬಡ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಈ ವರ್ಷ ಇದಕ್ಕೆ ಎರಡು ಕೋಟಿ ರೂಪಾಯಿಯನ್ನು ಏತಕ್ಕೆ ಕೊಡಬಾರದು ಸ್ವಾಮಿ ?

ಶ್ರೀ ಎಂ. ವೀರಪ್ಪಮೊಯ್ಲಿ.—ಈಗಾಗಲೇ ನಾನು ಉತ್ತರ ಹೇಳಿದ್ದೇನೆ. ನಾವು ಕಾನೂನಂ ರೀತ್ಯಾ ಹೋಗಬೇಕೇ ವಿನಾ ಇಷ್ಟ ಬಂದ ಹಾಗೆ ಹೋಗುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ಇದರ ಬಗ್ಗೆ ಒಂದು ಅಂತಿಮ ನಿರ್ಣಯ ಮಾಡಿ ಕಾನೂನು ರೀತ್ಯಾ ಇದಕ್ಕೆ ಎಷ್ಟು ಹಣ ವಿನಿಯೋಗ ಮಾಡಬೇಕೋ ಅಷ್ಟು ಹಣ ವಿನಿಯೋಗ ಮಾಡುವುದಕ್ಕೆ ಆದಷ್ಟು ಜಾಗ್ರತೆ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

Pension sanctioned to Sri Sharanappa S/o Basappa Teacher, Afzalpur Taluk.

865 SRI M. Y. PATEL (Afzalpur),—Will the Minister of State for Primary and Secondary Education be pleased to state.—

(a) whether Government had sanctioned the pension of Shri Sharanappa S/o Basappa, Ex-Voluntary Teacher, Afzalpur Taluk (No. TBS/1/MIS/475/GL 79-80),

(b) if not when the Govt. is going to sanction the pension to the said teacher?

SMT. NAGAMMA C. KESHAVAMURTHY ---(Minister of State for Primary and Secondary Education).—

(a) No

(b) As per existing rules the teacher is not eligible for pension

ಶ್ರೀ ಎಂ. ವೈ ಪಾಟೀಲ್.—ಸ್ಟೇಟ್ ರೀಆರ್ಗನೈಸೇಷನ್ ಪೂರ್ವದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಈ ಕೆಲವರು ವಾಲಂಟರಿ ಉಪಾಧ್ಯಾಯರಾಗಿದ್ದರು ಸ್ಟೇಟ್ ರೀಆರ್ಗನೈಸೇಷನ್ ಆದಮೇಲೆ ಅವರನ್ನು ಇಲ್ಲಿಯೇ ಅಬಸಾರ್ಬ್ ಮಾಡಿಕೊಂಡು ಇಲ್ಲಿ ಸರ್ಕಾರದ ಒಂದು ಪೇಸ್ಕೇಲ್ ಏನು ಇದೆಯೊ ಅದನ್ನು ಕೊಟ್ಟು ಅವರ ಸರ್ವಿಸನ್ನು ಅನ್ನು ಕಂಟಿನ್ಯೂ ಮಾಡಿದರು ಈಗ ಕೆಲವರು ಕಂಟಿನ್ಯೂ ಆಗುತ್ತಾ ಇದ್ದಾರೆ ಇನ್ನು ಕೆಲವರು ನಿವೃತ್ತರಾಗಿದ್ದಾರೆ. ಈಗ ನಿವೃತ್ತರಾಗಿರುವವರಲ್ಲಿ ಶ್ರೀ ಶರಣಪ್ಪ ಅನ್ನುವವರೂ ಒಬ್ಬರು. ಅವರಿಗೆ ನಿವೃತ್ತರಾದ ಮೇಲೆ ಸರ್ಕಾರದ ಒಂದು ಬೆನಿಫಿಟ್ಸ್ ಏನು ಸಿಗಬೇಕೋ ಅದು ಸಿಕ್ಕಿಲ್ಲ. ಆದುದರಿಂದ ಈಗ ಅವರ ಹೆಂಡಿರು ಮತ್ತು ಮಕ್ಕಳು ಭಿಕ್ಷೆ ಬೇಡುತ್ತಿದ್ದಾರೆ. ಆವರಿಗೆ ಇದುವರೆಗೆ ಏತಕ್ಕೆ ಪರಿಹಾರ ಕೊಟ್ಟಿಲ್ಲಾ ಅನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ಎಂದು ಕೇಳುತ್ತೇನೆ.